ನೋಡು... ಫ್ರಿಡ್ಜಿನಿಂದ ಮೊಸರು ತೆಗಿ..'

'ಚಪಾತಿ ಜೊತೆಗೆ ಪಲ್ಯನೋ, ಸಾಗುನೋ ಮಾಡೇ ಇರ್‍ತಿಯಾ, ಗೊತ್ತು. ಫ್ರಿಡ್ಜಿನಲ್ಲಿ ಮೊಸರು ತೆಗಿಬೇಕು. ಅದೂ ಗೊತ್ತು. ಎಲ್ಲಾ ಯಾಕೆ ಹೇಳತಿಯಾ?' ಮಗನ ದನಿ. ತಲೆ ಎತ್ತಿ ಅವನತ್ತ ನೋಡಿ ನಕ್ಕು ಕಾವಲಿ ಕಾದಿದೆಯಾ ಎಂದು ನೋಡಲು ಚೂರು ಎಣ್ಣೆ ಸವರಿದೆ...

'ಅಯ್ಯೋ... ಅತ್ತೆ... ಹೇಳಿದ್ದು ನನಗೆ. ಹೇಳಲಿ ಬಿಡು ಮಾತನಾಡೋಕೆ ಬಿಡೊಲ್ಲ ನೀನು...'

'ನೀವಿಬ್ಬರೂ ಸೇರಿ ಆಡೋ ಅಷ್ಟು ಮಾತು ಟೀವಿ ಚಾನೆಲ್ಲುಗಳಲ್ಲಿ ಸುದ್ದಿ ಹೇಳೋರು ಕೂಡ ಆಡೊಲ್ಲ... ಅಷ್ಟು ಮಾತಾಡ್ತೀರಿ...'

ಸಾಟಿ ಮಾಡಿ, ಲಟ್ಟಿಸಿ, ಕಾವಲಿಯ ಮೇಲೆ ಬೇಯಿಸಿದ್ದ ಬಿಸಿ ಚಪಾತಿಯನ್ನು ಸೌಮ್ಯ ಕೊಟ್ಟ ತಟ್ಟೆಗೆ ಹಾಕಿ, ಅದನ್ನು ವಿವೇಕನ ಕೈಗಿತ್ತು, ಮತ್ತೊಂದು, ಲಟ್ಟಿಸಿದ್ದ ಚಪಾತಿಯನ್ನು ಕಾವಲಿಯ ಮೇಲೆ ಹಾಕಿ ಸುತ್ತಾ ಎಣ್ಣೆ ಸವರಿದೆ.

'ಸಾಗು ಹಾಕ್ಕೊ, ಇವ್ನು ಮೊದಲಿನಿಂದಲೂ ಮಾತು ಕಮ್ಮಿ. ಪ್ರಕಾಶ್ ಕೂಡ ಮಾತು ಕಡಿಮೆಯೇ. ಒಬ್ಬಳೇ ಯಾರ ಜೊತೆ ಮಾತನಾಡಲಿ? ಈಗ ನೀನು ಬಂದ ಮೇಲೆ ನನ್ನ ದನಿ ಏಳುತ್ತಿದೆ. ನಾಳೆ ನೀನು ಹೊರಡುತಿಯಾ... ನಾನು ತಿರುಗಿ ಮೌನಿ... ನೀನೂ ತಟ್ಟೆ ತಗೋ...'

ಮತ್ತೊಂದು ಹಾಟ್‌ಬಾಕ್ಸನ್ನು ಪಕ್ಕಕ್ಕಿಟ್ಟಳು ಸೌಮ್ಯ.

'ಇದರಲ್ಲಿ ಹಾಕಿ ಅತ್ತೆ... ನಾವು ಒಟ್ಟಿಗೆ ತಿನ್ನೋಣ...' ಕಾವಲಿಯ ಮೇಲೆ ಎರಡೂ ಬದಿ ಬೆಂದ ಚಪಾತಿಯನ್ನು ಹಾಟ್‌ಬಾಕ್ಸಿಗೆ ಹಾಕಿ, ಅಷ್ಟರಲ್ಲಿ ಸಾಟಿ ಮಾಡಿ ಲಟ್ಟಿಸಿದ್ದ ಚಪಾತಿಯ ಹಾಳೆಯನ್ನು ಕಾವಲಿಯ ಮೇಲೆ ಹಾಕಿ, ಸುತ್ತಾ ಎಣ್ಣೆ ಸವರಿದೆ.

'ನೀನು ತೊಗೊಂಡು ಬಿಡು ಸೌಮ್ಯ. ಬಿಸಿ ಇದ್ದಾಗಲೇ ಚೆನ್ನ...' ನನ್ನ ಮಾತು ಕೇಳಲಿಲ್ಲ ಅವಳು. ಮತ್ತೊಂದು ಉಂಡೆಯನ್ನು ತೆಗೆದುಕೊಂಡು, ಲಟ್ಟಿಸಿ, ಸಾಟಿ ಹಾಕಿ, ಮಡಚಿ, ಹಿಟ್ಟಿನಲ್ಲಿ ಅದ್ದಿ ಮಣೆಯ ಮೇಲೆ ಹಾಕಿಕೊಂಡು ಲಟ್ಟಿಸತೊಡಗಿದೆ.

'ಈ ಚಪಾತಿ ಮಾಡೋದು ಒಂದು ಕಲೆ ಅಲ್ವಾ ಅತ್ತೆ!... ಇಟ್ ನೀಡ್ಸ್ ಟೈಂ ಮ್ಯಾನೇಜ್‌ಮೆಂಟ್ ಟೂ. ಸಾಟಿಮಾಡಬೇಕು, ಎಣ್ಣೆ ಹಾಕಬೇಕು... ಒಂದು ಬೇಯುವ ವೇಳೆಗೆ ಇನ್ನೊಂದು ರೆಡಿ ಇರಬೇಕು. ಅಬ್ಬಾ! ನಾನು ಚಪಾತಿ ಮಾಡಬೇಕು ಅಂದರೆ, ಎಲ್ಲಾ ಒಟ್ಟಿಗೆ ಲಟ್ಟಿಸಿ ಇಟ್ಟುಕೊಂಡು, ಆಮೇಲೆ ಒಲೆ ಹಚ್ಚುತ್ತೇನೆ...' ಸೌಮ್ಯ ಹೇಳಿದಾಗ ಅವಳತ್ತ ಪ್ರೀತಿಯಿಂದ ನೋಡಿದೆ. ಚಪಾತಿ ಮಾಡುವುದನ್ನು ಕೂಡ ಹೊಗಳುವ, ಅದನ್ನು ಒಂದು ಕಲೆಯ ಮಟ್ಟಕ್ಕೆ ಏರಿಸುವ ಅವಳ ಸಹೃದಯತೆಗೆ ನನ್ನಲ್ಲಿ ಮಾತುಗಳಿರಲಿಲ್ಲ.

'ಇದ್ಯಾವ ಮಹಾ ವಿದ್ಯೆ?... ನಾಲ್ಕು ದಿನ ಮಾಡಿದ್ರೆ ತಾನಾಗೇ ಬರುತ್ತೆ...' ಮೆಲ್ಲನೆ ಹೇಳಿದೆ.

'ನಾಲ್ಕು ದಿನ ಏನು ಬಂತು? ಎರಡು ವರ್ಷದಿಂದ ಮಾಡ್ತಾ ಇದಾಳೆ. ಇನ್ನೂ ಬಂದಿಲ್ಲ...' ತಟ್ಟೆ ಹಿಡಿದು ಒಳ ಬಂದ ವಿವೇಕನ ತಟ್ಟೆಗೆ ಕಾವಲಿಯ ಮೇಲಿದ್ದ ಚಪಾತಿ ಹಾಕಿ, ಮತ್ತೊಂದು ಲಟ್ಟಿಸಿದ್ದನ್ನು ಕಾವಲಿಯ ಮೇಲೆ ಹಾಕಿದೆ.

'ಸುಮ್ಮನಿರೋ ಸಾಕು.' ಮಗ ಸೊಸೆ ಇರುವುದು ಸಿಂಗಪುರದಲ್ಲಿ. ಮೂರು ವಾರದ ರಜೆಯ ಮೇಲೆ ಬಂದಿರುವುದು. ಅವರ ಸಮರಸ ದಾಂಪತ್ಯ, ಕಲಕಲ ಮಾತು, ಕಣ್ಣ ನೋಟ... ಕೇಳಲು, ನೋಡಲು ಅದೆಷ್ಟು ಚೆಂದ.

'ಸೌಮ್ಯ... ಆಯ್ತು ನೋಡು... ತಟ್ಟೆಗೆ ಸಾಗು ಹಾಕು ಇಬ್ಬರೂ ತೊಗೊಳೋಣ...'

'ಅಪ್ಪ ಯಾವಾಗ ಬರೋದು? ನಾಳೆ ಬೆಳಗ್ಗೆನೋ ಅಥವಾ ಸಾಯಂಕಾಲವೋ?'